<u>**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಅಫಜಲಪೂರ.**</u>

<u>**ಸಿ.ಸಿ.ನಂ.196/2014**</u>

ಸರಕಾರದ ಪರವಾಗಿಃ ಅಫಜಲಪೂರ ಪೊಲೀಸ್ ಠಾಣೆ

-:ವಿರುದ್ದ:-

ಆರೋಪಿ/ತರುಃ ಶಂಕರ ತಂದೆ ಲಕ್ಷ್ಮಣ ಚವಾಣ್,
25 ವರ್ಷ, ಉಃಲಾರಿ ನಂ.ಕೆಎ-25-ಬಿ-2247
(ಮೂಲ ನಂಬರ ಕೆಎ-31-ಎ-4328) ನೇದ್ದರ ಚಾಲಕ,
ವಾಸಃ ಮುದನೂರ ಗ್ರಾಮ, ತಾಃ ಸುರಪೂರ,
ಜಿಃ ಯಾದಗಿರ.

<u>**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿತನ ಹೇಳಿಕೆಗಳು**</u>

ಪ್ರಃ1: ಈ ಪ್ರಕರಣದಲ್ಲಿರುವ ಸಾಕ್ಷಿಗಳ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದಿರಾ ?

ಉಃ

ಪ್ರಃ 2 ಪ್ರಾಸಾ-05 ಮಂಜುನಾಥ ಸಿಲವೇರಿ ತಂದೆ ನಾರಾಯಣಪ್ಪ, ಪಿ.ಐ. ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 16.01.2012 ರಂದು ಪ್ರಕರಣದ ಕಡತವನ್ನು ಚಾಸಾ-18 ರವರಿಂದ ವಹಿಸಿಕೊಂಡು ಕಡತವನ್ನು ಪರಿಶೀಲಿಸಿ, ದಿನಾಂಕಃ 17.04.2012 ರಂದು ಪ್ರಕರಣದಲ್ಲಿ ಭಾಗಿಯಾದ ವಾಹನ ನಂ.ಕೆಎ-25/ಬಿ-2247 ನ್ನು ಹುಬ್ಬಳ್ಳಿ ಕಾರಾವಾರ ರಸ್ತೆಯಲ್ಲಿರುವ ಭಾರತ ಮಿಲ್ಸ ಪೇ ಆಂಡ್ ಪಾರ್ಕಿಂಗ ಲಾಟ್ ನಲ್ಲಿ ಸದರಿ ಲಾರಿಯ ನಿಜವಾದ ನಂ.ಕೆಎ-32-ಎ-4328ನ್ನು ಅಳವಡಿಸಿ ಕೃತ್ಯಕ್ಕೆ ಬಳಸಿದ ನಂ.ಕೆಎ-25-ಬಿ-2247 ನೇದ್ದರ ನಂಬರ ಪ್ಲೇಟನ್ನು ಕ್ಯಾಬಿನನಲ್ಲಿಟ್ಟಿದ್ದು ಅದನ್ನು ಚಾಸಾ-5 ಮತ್ತು 6 ರವರ ಸಮಕ್ಷಮ ಜಪ್ತಿಪಡಿಸಿಕೊಂಡಿರುತ್ತೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 3 ಪ್ರಾಸಾ-05 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕಃ 18.01.2012 ರಂದು ಖಚಿತ ಬಾತ್ಮಿ ಮೇರೆಗೆ ದೇವರ ಹಿಪ್ಪರಗಿಯ ಮಲ್ಲಯ್ಯನ ಗುಡಿಯ ಹತ್ತಿರ ಸದರಿ ಪ್ರಕರಣದ ಆರೋಪಿತರಿದ್ದ ಬಗ್ಗೆ ಮಾಹಿತಿ ಮೇರೆಗೆ ಅವರನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿ ಸದರಿ ದೇವಸ್ಥಾನದ ಆವರಣದಲ್ಲಿದ್ದ ಕೃತ್ಯಕ್ಕೆ ಬಳಸಿದ ಮತ್ತೊಂದು ಲಾರಿ ನಂ.ಕೆಎ-28-ಎ-7587 ನ್ನು ಚಾಸಾ-12 ರವರು ತೊರಿಸಿಕೊಟ್ಟು ವಾಹನವನ್ನು ಚಾಸಾ-5 ಮತ್ತು 6 ರವರ ಸಮಕ್ಷಮ ಪಂಚನಾಮೆ ಮೂಲಕ ಜಪ್ತಿಪಡಿಸಿಕೊಂಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರ: 4 ಪ್ರಾಸಾ-05 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಂತರ ಅದೇ ದಿವಸ ಬೆಳಿಗ್ಗೆ 9-00 ರಿಂದ 11-00 ಗಂಟೆವರೆಗೆ ಚಾಸಾ-14 ರವರು ತೋರಿಸಿದ 360 ಸಕ್ಕರೆ ತುಂಬಿದ ಚೀಲಗಳನ್ನು ಅವರ ಅಂಗಡಿಯಿಂದ ಚಾಸಾ-5 ಮತ್ತು 6 ರವರ ಸಮಕ್ಷಮ ಜಪ್ತಿಪಡಿಸಿಕೊಂಡಿದ್ದು, ಸದರಿ ಸಕ್ಕರೆ ಚೀಲಗಳನ್ನು ನ್ಯಾಯಾಲಯದ ಅನಮತಿ ಮೇರೆಗೆ ತಮ್ಮ ವಶದಲ್ಲಿಟ್ಟುಕೊಂಡಿದ್ದು ನಂತರ ನ್ಯಾಯಾಲಯದ ಆದೇಶದ ಮೇರೆಗೆ ಫಿರ್ಯಾದಿಯ ವಶಕ್ಕೆ ನೀಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರ: 5 ಪ್ರಾಸಾ-05 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಅದೇ ದಿವಸ ಚಾಸಾ-11 ರಿಂದ 16 ರವರ ಹೇಳಿಕೆಗಳನ್ನು ಪಡೆದುಕೊಂಡು ಹಾಗೂ ನಂತರ ಆರೋಪಿತರನ್ನು ಹಾಗೂ ಮುದ್ದೆಮಾಲನ್ನು ಠಾಣೆಗೆ ಹಾಜರುಪಡಿಸಿ ಆರೋಪಿತರ ಸ್ವಖುಷಿ ಹೇಳಿಕೆ ಪಡೆದು ನಂತರ ಆರೋಪಿತರನ್ನು ನ್ಯಾಯಾಂಗ ಬಂಧನಕ್ಕೆ ಕಳುಹಿಸಿಕೊಟ್ಟಿರುತ್ತೇನೆಂದು ಹಾಗೂ ದಿನಾಂಕಃ 22.03.2011 ರಂದು ಚಾಸಾ-17 ರವರ ಹೇಳಿಕೆ ಪಡೆದುಕೊಂಡು, ದಿನಾಂಕಃ 20.05.2011 ರಂದು ಚಾಸಾ-20 ರವರು ಲಾರಿ ಮಾಲೀಕತ್ವದ ಬಗ್ಗೆ ವರದಿ ನೀಡಿದ್ದು ಮತ್ತು ಸದರಿ ವಾಹನಗಳಿಗೆ ಸಂಬಂಧಪಟ್ಟ ದಾಖಲೆಗಳು ಮತ್ತು ಶುಗರ ಫ್ಯಾಕ್ಟರಿಯಿಂದ ಡೆಲಿವರಿಯಾದ ಬಗ್ಗೆ ದಾಖಲೆ ಪಡೆದುಕೊಂಡು, ದಿನಾಂಕಃ 06.11.2011 ರಂದು ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತನ ವಿರುದ್ದ ದೋಷಾರೋಪಣೆ ಪಟ್ಟಿ ಸಲ್ಲಿಸಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರ: 6 ಪ್ರಾಸಾ-06 ನಜೀರ ಅಹ್ಮದ ಸೈಯದ ತಂದೆ ಮದನಸಾಬ ನಿವೃತ್ತ ಎ.ಎಸ್.ಐ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ22.12.2010 ರಂದು ಠಾಣೆಯ ಕರ್ತವ್ಯದಲ್ಲಿದ್ದಾಗ, ಚಾಸಾ-1 ರವರು ಹಾಜರಾಗಿ ಫಿರ್ಯಾದಿ ಸಲ್ಲಿಸಿದ್ದು, ಸದರಿ ಫಿರ್ಯಾದಿಯ ಆಧಾರದ ಮೇಲಿಂದ ಠಾಣಾ ಗುನ್ನೆ ನಂ.181/2010 ಎಂದು ದಾಖಲಿಸಿಕೊಂಡು ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಅದರ ಪ್ರತಿಯನ್ನು ತಮ್ಮ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರ: 7 ಪ್ರಾಸಾ-06 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕಃ23.12.2010 ರಂದು ಚಾಸಾ-9 ರವರು ತೋರಿಸಿದ ಘಟನಾ ಸ್ಥಳವನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆ ಮಾಡಿರುತ್ತೇನೆಂದು ಹಾಗೂ ತಾನು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಶಾನೆ ಪಿ-1 ಎಂದು ಗುರುತಿಸಿದ್ದು ತನ್ನ ಸಹಿಯನ್ನು ನಿಶಾನೆ ಪಿ-1(ಸಿ) ಎಂದು ಗುರುತಿಸಲಾಯಿತು. ನಂತರ ಘಟನೆ ಕುರಿತು ಚಾಸಾ-6 ರಿಂದ 8 ರವರ ಹೇಳಿಕೆ ಪಡೆದುಕೊಂಡು ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-19 ರವರು ವಹಿಸಿಕೊಂಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರ: 8 ಪ್ರಾಸಾ-07 ಮಲಕಪ್ಪ ಮುದೋಡಗಿ ತಂದೆ ಬಸಪ್ಪ ನಿವೃತ್ತ ಹೆಚ್.ಸಿ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 02.04.2011 ರಂದು ವಾಹನ ಸಂಖ್ಯೆಃ ಕೆಎ-25-ಬಿ-2247 ನೇದ್ದರ ಆರ್.ಟಿ.ಓ ಪುಣೆಯಿಂದ Form No.15 ನ್ನು ಪಡೆದು ಮೇಲಾಧಿಕಾರಿಗಳಿಗೆ ನೀಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರ: 9 ಪ್ರಾಸಾ-08 ಮರಳಸಿದ್ದಪ್ಪ ತಂದೆ ಅಂದಾನಪ್ಪ ಖಾಸಗಿ ಕೆಲಸ, ಇವರು ತಮ್ಮ ಸಾಕ್ಷ್ಯದಲ್ಲಿ ಈಗ್ಗೆ 2010 ರಲ್ಲಿ 1ನೇ ಆರೋಪಿತನು ಲಾರಿ ನಂ.ಕೆಎ-25-ಬಿ-2247 ರಲ್ಲಿ ಗೊಡಾನನಿಂದ 50 ಕೆಜಿಯ 460 ಸಕ್ಕರೆ ಚೀಲಗಳನ್ನು ಲಾರಿ ತುಂಬಿಸಿಕೊಂಡು ಬೇರೆ ಕಡೆ ಹೋಗಿ ಮಾರಾಟ ಮಾಡಿರುತ್ತಾನೆಂದು ಈ ಘಟನೆ ಕುರಿತು ಹೇಳಿಕೆ ನೀಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರ: 10 ಪ್ರಾಸಾ-10 ಮಹ್ಮದ ಇಬ್ರಾಹಿಂ ತಂದೆ ಮಹ್ಮದ ಖಾಜಾ, ವ್ಯಾಪಾರಸ್ಥರು, ಇವರು ತಮ್ಮ ಸಾಕ್ಷ್ಯದಲ್ಲಿ ಈಗ್ಗೆ ತಾನು 20 ವರ್ಷದಿಂದ ಟ್ರಾನ್ಸಪೋರ್ಟ ವ್ಯಾಪಾರ ಮಾಡುತ್ತಿದ್ದು, ಈಗ್ಗೆ 3-4 ವರ್ಷಗಳ ಹಿಂದೆ 460 ಸಕ್ಕರೆ ಚೀಲಗಳು ಕಳುವಾದ ಬಗ್ಗೆ ನಿಶಾನೆ ಪಿ-18 ರಂತೆ ದೂರು ಸಲ್ಲಿಸಿದ್ದು, ತಾನು ಫಿರ್ಯಾದಿಯನ್ನು ಮತ್ತು ಅದರ ಮೇಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರ-11 ಈ ಕೇಸಿನ ಬಗ್ಗೆ ನಿಮಗೆ ಏನಾದರೂ ಹೇಳುವುದು ಇದೆಯೇ?

ಉಃ

ಪ್ರ-12 ಈ ಕೇಸಿನ ಬಗ್ಗೆ ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಚಿಸುವಿರಾ?

ಉಃ

(ಆರೋಪಿತನ ಹೇಳಿಕೆಯನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವನಿಂದ ಬಂದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು)

ದಿನಾಂಕಃ 03.02.2026

ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಅಫಜಲಪೂರ.